ಮೈಸೂರು ಮಿನರಲ್ಸ್‌ನ ಭ್ರಷ್ಟ ಅಧಿಕಾರಿಗಳ ಮಾಹಿತಿ.

127 (45) ಡಾ: ಹೆಚ್.ಸಿ.ಮಹದೇವಪ್ಪ (ಟಿ.ನರಸೀಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000ನೇ ಸಾಲಿನಿಂದ 2006ರ ವರೆಗೆ ಮೈಸೂರು ಮಿನರಲ್ಸ್ ಗಣಿಗಳಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿ ಮತ್ತು ಭ್ರಷ್ಟಾಚಾರ ಮಾಡಿ ಲೋಕಾಯುಕ್ತರಿಂದ ಗುರುತಿಸಲ್ಪಟ್ಟಿರುವ ಅಧಿಕಾರಿಗಳೆಷ್ಟು (ಹೆಸರು ಸಹಿತ ವಿವರ ನೀಡುವುದು);

ಆ) ಎಂಎಂಎಲ್ ಕೇಂದ್ರ ಕಛೇರಿಯಲ್ಲಿ ಕಬ್ಬಿಣದ ಅದಿರಿನ ಬೆಲೆ ನಿಗದಿ ಪಡಿಸಲು ಹಾಗೂ ಅದಿರಿನ ಮಾರಾಟದ ಆದೇಶವನ್ನು ಶಿಫಾರಸ್ಸು ಮಾಡುವ ಅಧಿಕಾರವನ್ನು ಯಾರಿಗೆ ನೀಡಲಾಗಿದೆ.

ಇ) ಸಂಸ್ಥೆಯಲ್ಲಿ ಇದುವರೆವಿಗೂ ಯಾವ ಬೆಲೆಯಲ್ಲಿ ಕಬ್ಬಿಣದ ಅದಿರನ್ನು ಮಾರಾಟ ಮಾಡಲಾಗಿದೆ (ಎಂಎಂಎಲ್ ನಿಗದಿಪಡಿಸಿದ ಬೆಲೆಗೂ ಎಂಎಂಟಿಸಿ ಬೆಲೆಗೂ ವ್ಯತ್ಯಾಸದ ವಿವರ ನೀಡುವುದು).

ಈ) ಕಬ್ಬಿಣ ಅದಿರಿನ ಮಾರಾಟದಿಂದ 2000 ರಿಂದ 2008ರ ವರೆಗೆ ಎಂಎಂಎಲ್ ಸಂಸ್ಥೆಗೆ ಸುಮಾರು ಎಷ್ಟು ಕೋಟಿ ರೂ.ಗಳು ನಷ್ಟವಾಗಿದೆ;

ಉ) 2000–2006 ಮತ್ತು 2008ರ ವರೆಗೆ ಸಂಸ್ಥೆಗೆ ಕೋಟ್ಯಾಂತರ ರೂ.ಗಳ ನಷ್ಟ ಉಂಟಾಗಲು ಕೇಂದ್ರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮೇಲೆ ಹಾಗೂ ಕಬ್ಬಿಣದ ಅದಿರಿನ ಗಣಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮಗಳೇನು.

ಊ) ಎಂಎಂಎಲ್ ಸಂಸ್ಥೆಯ ಜಂಟಿ ಸಹಭಾಗಿತ್ವದಲ್ಲಿ ಗಣಿಯನ್ನು ನಡೆಸುತ್ತಿರುವ ಸಂಸ್ಥೆಗಳ ಹೆಸರು ಇದಕ್ಕೆ ಕರಾರನ್ನು ಸಿದ್ಧಪಡಿಸಿದ ಅಧಿಕಾರಿಯ ಹೆಸರು, ಈ ಜಂಟಿ ಸಹಭಾಗಿತ್ವದಿಂದ ಸಂಸ್ಥೆಗೆ ಉಂಟಾಗಿರುವ ನಷ್ಟ, ಈ ನಷ್ಟಕ್ಕೆ ಕಾರಣರಾದ ಅಧಿಕಾರಿಯ ಮೇಲೆ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು ಮಿನರಲ್ಸ್ ಸಂಸ್ಥೆಯ ಕಬ್ಬಿಣ ಅದಿರು ಗಣಿಗಳಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ ಮತ್ತು ಲೋಕಾಯುಕ್ತರಿಂದ ಗುರುತಿಸಲ್ಪಟ್ಟಿರುವ ಅಧಿಕಾರಿಗಳ ವಿವರಗಳು ಈ ಕೆಳಕಂಡಂತಿದೆ.

1) ಶ್ರೀ. ಕೆ. ಶ್ರೀನಿವಾಸ, ಉಪ ಪ್ರಧಾನ ವ್ಯವಸ್ಥಾಪಕರು(ನಿ)
2) ಶ್ರೀ. ಎಂ. ರಾಮಪ್ಪ, ಸಹಾಯಕ ಪ್ರಧಾನ ವ್ಯವಸ್ಥಾಪಕರು (ರಾಜೀನಾಮೆ)
3) ಶ್ರೀ. ಶಂಕರಲಿಂಗಯ್ಯ, ಉಪ ಪ್ರಧಾನ ವ್ಯವಸ್ಥಾಪಕರು (ಉ), (ಅಮಾನತ್ತು).

ಆ) ಈಗಾಗಲೇ ಸಂಸ್ಥೆಯು ಕಬ್ಬಿಣ ಅದಿರಿನ ದರ ನಿಗದಿ ಹಾಗೂ ಮಾರುಕಟ್ಟೆ ನೀತಿಯನ್ನು ರೂಪಿಸಿದ್ದು ಸದರಿ ನೀತಿಯನ್ವಯ ಸ್ಥಳೀಯ ಮಾರುಕಟ್ಟೆ ದರ, ಎಫ್.ಒ.ಬಿ, ರಫ್ತು ದರ, ಎಂಎಂಟಿಸಿ ದರ, ಒರಿಸ್ಸಾ ಮೈನಿಂಗ್ ಕಾರ್ಪೊರೇಷನ್ ದರ ಮುಂತಾದ ಸಂಸ್ಥೆಗಳ ಚಾಲ್ತಿ ದರ ಹಾಗೂ ಮಾಹೆಯಾನ ಈ ನಿಗಮದ ಟೆಂಡರ್ ಮತ್ತು ಹರಾಜು ದರಗಳನ್ನು ಗಣನೆಗೆ ತೆಗೆದುಕೊಂಡು ಅದಿರು ಮಾರಾಟ ದರವನ್ನು ನಿಗಮವು ನಿಗದಿಪಡಿಸುತ್ತದೆ. ಈ ನಿಟ್ಟಿನಲ್ಲಿ ನಿಗಮದ "ಕಾರ್ಯಕಾರಿ ಸಮಿತಿ" ಸಹ ನೆರವಾಗುತ್ತದೆ.

ಇ) ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಿದೆ.
(ಅನುಬಂಧ–1)

ಈ) ಮಾನ್ಯ ಲೋಕಾಯುಕ್ತರು ದಿನಾಂಕ: 18.02.2008 ರಂದು ಸರ್ಕಾರಕ್ಕೆ ನೀಡಿರುವ ತಮ್ಮ ತನಿಖಾ ವರದಿಯಲ್ಲಿ 2000–2006 ರ ಅವಧಿಯಲ್ಲಿ ಸಂಸ್ಥೆಗೆ ರೂ. 642,32,85,951/– ಗಳು ನಷ್ಟವಾಗಿದೆ ಎಂದು ವರದಿ ಮಾಡಿರುತ್ತಾರೆ.

2006–2008ರ ಅವಧಿಗೆ ಸಂಬಂಧಿಸಿದಂತೆ, ತನಿಖಾ ವರದಿಯನ್ನು ಮಾನ್ಯ ಲೋಕಾಯುಕ್ತರಿಂದ ನಿರೀಕ್ಷಿಸಲಾಗುತ್ತಿದೆ.

ಉ) ಮೆ:ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯ ಅವ್ಯವಹಾರಗಳ ಬಗ್ಗೆ ತನಿಖೆಯನ್ನು ಮಾನ್ಯ ಲೋಕಾಯುಕ್ತರಿಗೆ ವಹಿಸಿದ್ದು, ಮಾನ್ಯ ಲೋಕಾಯುಕ್ತರು ದಿನಾಂಕ: .18.12.2008 ರಂದು ಸರ್ಕಾರಕ್ಕೆ

ನೀಡಿರುವ ತಮ್ಮ ತನಿಖಾ ವರದಿಯಲ್ಲಿ, ಸಂಸ್ಥೆಗೆ ಉಂಟಾಗಿರುವ ನಷ್ಟಕ್ಕೆ ಈ ಹಿಂದೆ ಸದರಿ ಸಂಸ್ಥೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ 5 ಐಎಎಸ್ ಅಧಿಕಾರಿಗಳು ಮತ್ತು ಓರ್ವ ಐಪಿಎಸ್ ಅಧಿಕಾರಿ ಹಾಗೂ ಸಂಸ್ಥೆಯ ಮೂರು ಜನ ಅಧಿಕಾರಿಗಳು ಕಾರಣಕರ್ತರಾಗಿರುತ್ತಾರೆ ಎಂದು ವರದಿ ಮಾಡಿರುತ್ತಾರೆ. ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಿಗೆ ಹಾಗೂ ಸಂಸ್ಥೆಯ 3 ಜನ ಅಧಿಕಾರಿಗಳಿಗೆ ಈಗಾಗಲೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿದ್ದು, ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನಂತೆ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಮೈಸೂರು ಮಿನರಲ್ಸ್ ಇಬ್ಬರು ಈಗಾಗಲೇ ನಿವೃತ್ತಿ ಹೊಂದಿದ್ದು, ಒಬ್ಬರನ್ನು ಅಮಾನತ್ತುಗೊಳಿಸಲಾಗಿದೆ.

ಮುಂದುವರಿದು ಈ ಕೆಳಕಂಡ ಅಧಿಕಾರಿಗಳ ವಿರುದ್ಧವು ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗಿದೆ.

1) ಶ್ರೀ. ಬಿ.ಟಿ.ಲಕ್ಷ್ಮಣ್, ಮುಖ್ಯ ಪ್ರಧಾನ ವ್ಯವಸ್ಥಾಪಕರು
2) ಶ್ರೀ. ಚಂದ್ರಶೇಖರ್, ಸಹಾಯಕ ಪ್ರಧಾನ ವ್ಯವಸ್ಥಾಪಕರು
3) ಶ್ರೀ. ಹೆಚ್.ಚಂದ್ರಶೇಖರಯ್ಯ, ಸಹಾಯಕ ವ್ಯವಸ್ಥಾಪಕ
4) ಶ್ರೀ ಶಿವನಂಜಪ್ಪ, ಕಛೇರಿ ಅಧೀಕ್ಷಕರು

ಊ) ಮೈಸೂರು ಮಿನರಲ್ಸ್ ಲಿಮಿಟೆಡ್ ಮತ್ತು ಜಿಂದಾಲ್ ಸ್ಟೀಲ್ ವರ್ಕ್ಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ವಿಜಯನಗರ ಮಿನರಲ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದು, ಸದರಿ ಸಂಸ್ಥೆ ಮುಖಾಂತರ 1999 ರಿಂದ ತಿಮ್ಮಪ್ಪನಗುಡಿ ಕಬ್ಬಿಣದ ಅದಿರು ಗಣಿಯನ್ನು ನಡೆಸಲಾಗುತ್ತಿದೆ. ಉಭಯ ಸಂಸ್ಥೆಗಳ ನಡುವೆ ದಿನಾಂಕ: 17.01.1997 ರಂದು ಮೆಮೊರಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಗ್ ಮಾಡಿಕೊಳ್ಳಲಾಗಿರುತ್ತದೆ.

ಸಂಸ್ಥೆಯೊಂದಿಗಿನ 2000–2006ರ ವಹಿವಾಟುಗಳನ್ನು ಪರಿಶೀಲಿಸಲಾಗಿ ಒಟ್ಟು ರೂ. 60,67,99,558/– ಸಂಸ್ಥೆಗೆ ಸಂದಾಯವಾಗದೇ ಇದ್ದುದನ್ನು ಗುರುತಿಸಿ ಬೇಡಿಕೆ ಜಾರಿ ಮಾಡಿದ ನಂತರ ರೂ.49,54,85,229/– ಗಳನ್ನು ಈಗಾಗಲೇ ವಸೂಲಿ ಮಾಡಲಾಗಿದೆ.

MYSORE MINERALS LIMITED
PRICES OF IRON ORE FINES 63/64% Fe. From 2006-07 TO 2009-10 (upto Feb, 2010)

Date	MMTC PRICE on FOR Basis PDMT inclusive of Royalty, FDT, Cess	MML PRICE PMT ON EX-MINE BASIS Excluding all	Remarks
	Rs. PMT	Rs. PMT.	MML Price is on the day of delivery less transportation of Rs. 98/- on ex-mine basis excluding Royalty, Cess, WPT, Loading Charges and applicable taxes
28.07.2006	1250	1152	
08.09.2006	1175	1077	
07.11.2006	1145	1047	-"-
22.11.2006	1230	1132	-"-
09.01.2007	1260	1162	-"-
05.02.2007	1350	1252	-"-
02.03.2007	1200	1102	-"-
04.04.2007	1375	1277	-"-
22.06.2007	1275	1177	-"-
03.07.2007	1375	1277	-"-
01.08.2007	1460	1362	-"-
14.08.2007	1575	1477	-"-
06.09.2007	1850	1752	-"-
25.09.2007	2000	1902	-"-
09.10.2007	2200	2102	

17.10.2007	2200	2277	(TENDER PRICE) This price is on Ex-mine basis excluding royalty, cess W.E.F. 17.10.07) WPT, Loading Charges andapplicable taxe
23.11.2007	2500	3065	(TENDER PRICE) -"-
18.01.2008	2800	3125	(TENDER PRICE) -"-
05.07.2008	2100	2765	(Tender cum auction) -"-
25.09.2008	1225	1450	-"-
12.11.2008	425	576	(Rejected)
11.12.2008	425	811	(Tender cum negotiation) –"-
05.01.2009	745	811	(Tender cum negotiation) –"-
12.02.2009	1100	811	MMTC PRICE revised on 12.02.2009
15.02.2009	1100	1100	Revised Price Prices will be revised 15th of each month
12.03.2009	850	1100	MMTC PRICE revised on 12.03.2009
15.03.2009	850	850	Revised Price Prices will be revised 15th of each month
18.03.2009	850	850	MMTC Price revised on 18.03.2009
15.04.2009	850	850	Revised Price Prices will be revised 15th of each month
13.05.2009	525	850	MMTC Prices revised on 13.05.2009

15.05.2009	525	811	Revised Price Prices will be revised 15th of each month
12.06.2009	1000	811	MMTC Price revised on 12.06.2009
15.06.2009	1000	1000	Revised Price Prices will be revised 15th of each month
15.07.2009	1000	1000	Revised Price Prices will be revised 15th of each month
15.08.2009	1000	1000	Revised Price Prices will be revised 15th of each month
15.09.2009	1000	1000	Revised Price Prices will be revised 15th of each month
17.09.2009	1125	1000	MMTC Price revised on 17.09.2009
15.10.2009	1125	1125	Revised Price Prices will be revised 15th of each month
22.10.2009	1125	1258	Tender Price
10.11.2009	1465	1125	MMTA Prices revises on 10.11.2009
15.11.2009	1465	1465	Revised Price Prices will be revised 15th of each month
15.12.2009	1465	1465	Revised Price Prices will be revised 15th of each month
29.12.2009	1465	1466	Tender Price
01.01.2010	1650	1466	MMTA Prices revises on 01.01.2010

15.01.2010	1650	1650	Revised Price Prices will be revised 15th of each month
26.02.2010	1650	2255	MML Tender Price

ಮೈಸೂರು ಮಿನರಲ್ಸ್‌ನಲ್ಲಿ ನಡೆದಿರುವ ಅವ್ಯವಹಾರ

128 (46) ಡಾ: ಹೆಚ್.ಸಿ.ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬ್ಬಿಣದ ಅದಿರಿನ ಗಣಿಗಳಿಗೆ ಸಂಬಂಧಿಸಿದಂತೆ ಮೈಸೂರು ಮಿನರಲ್ಸ್‌ನ ಕೇಂದ್ರ ಕಛೇರಿಯ 3 ಮಂದಿ ಅಧಿಕಾರಿಗಳು ಅವ್ಯವಹಾರದಲ್ಲಿ ಭಾಗಿಯಾಗಿ ಮುಖ್ಯವಾದ ಕಡತವನ್ನು ತಿದ್ದುವ ಮೂಲಕ ಸಂಸ್ಥೆಗೆ ಕೋಟ್ಯಾಂತರ ರೂಪಾಯಿ ನಷ್ಟಕ್ಕೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಹಿಂದಿನ ಮೈಸೂರು ಮಿನರಲ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕರು ಈ ನಿಟ್ಟಿನಲ್ಲಿ ಆ 3 ಜನ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಮತ್ತು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ವರದಿಯನ್ನು ಸಲ್ಲಿಸಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ (ವರದಿಯ ಅನುಬಂಧಗಳು) ಅವ್ಯವಹಾರದಲ್ಲಿ ಭಾಗಿಯಾದ ಅಧಿಕಾರಿಗಳ ಹೆಸರು ವಿಳಾಸ ನೀಡುವುದು)?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಂತಿಮ ನಡವಳಿಯನ್ನು ಹೊರಡಿಸುವಾಗ ಈ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲಾಗಿದೆ. ಆದುದರಿಂದ ಸಂಸ್ಥೆಗೆ ಯಾವುದೇ ರೀತಿಯ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ.

ಆ) ಹೌದು.

ಇ) ಈ ಗೊಂದಲಕ್ಕೆ ಕಾರಣರಾದವರು ಎನ್ನಲಾದ ಅಧಿಕಾರಿಗಳಿಗೆ ಈಗಾಗಲೇ ಕಾರಣ ಕೇಳುವ ನೋಟೀಸುಗಳನ್ನು ಜಾರಿ ಮಾಡಿ, ಅವರು ಗಳಿಂದ ವಿವರಣೆಯನ್ನು ಪಡೆದು ನಿಯಮಾನುಸಾರ ಕ್ರಮ ಜರುಗಿಸಲಾ ಗುತ್ತಿದೆ. ಅಧಿಕಾರಿಗಳ ವಿವರ ಕೆಳಕಂಡಂತಿವೆ.